2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ**118/2016**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಇನಾಸ್ ಡಿಸೋಜ | ಪಿಡಬ್ಲೂ - 2 |
| ತಂದೆಯ ಹೆಸರು | - | ಅಂಡ್ರೋ ಡಿಸೋಜ | ಸಿಡಬ್ಲೂ - 3 |
| ವಯಸ್ಸು | - | 36 ವರ್ಷ | |
| ಉದ್ಯೋಗ | - | ಪೈಂಟಿಂಗ್ | |
| ವಾಸ ಸ್ಥಳ | - | ಮೂಡಬಾಗಿಲು, ಎನ್.ಆರ್. ಪುರ ತಾಃ | |

ದಿನಾಂಕಃ 26-10-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -</u>

1. ನನಗೆ ಪಿರ್ಯಾದಿಯ ಪರಿಚಯವಿರುತ್ತದೆ. ಈಗ ತೋರಿಸಿದ ಮಹಜರ್ ಮೇಲೆ ನನ್ನ ಸಹಿ ಇದ್ದು ಸದರಿ ಮಹಜರ್ ನ್ನು ನಿ.ಪಿ.2 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸುಮಾರು 3 ವರ್ಷಗಳ ಹಿಂದೆ ಸದರಿ ಮಹಜರ್ ಮೇಲೆ ನಾನು ಪಿರ್ಯಾದಿಯ ಮನೆಯಲ್ಲಿ ಸಹಿ ಮಾಡಿರುತ್ತೇನೆ. ಆ ಸದರಿ ಸ್ಥಳದಲ್ಲಿ ಪಿರ್ಯಾದಿಯ ಮನೆಯಲ್ಲಿ ಕತ್ತಿ ಬಿದ್ದಿತ್ತು, ವಸ್ತುಗಳು ಅಲ್ಲಲ್ಲಿ ಚೆದುರಿದ್ದವು. ಹಣಕ್ಕಾಗಿ ಮನು ಎಂಬುವವರು ಪ್ರಸೀದ್ ಮೇಲೆ ಹಲ್ಲೆ ಮಾಡಿರುವ ವಿಷಯ ಗೊತ್ತಾಯಿತು. ಈ ವಿಷಯವನ್ನು ಘಟನಾ ಸ್ಥಳದಲ್ಲಿ ನನಗೆ ಪ್ರಸೀದ್ ರವರು ಹೇಳಿ ಘಟನಾ ಸ್ಥಳವನ್ನು ತೋರಿಸಿದರು. ನಂತರ ಪೊಲೀಸರು ಸದರಿ ಸ್ಥಳದ ಮಹಜರ್ ಮಾಡಿ ಫೋಟೋ ತೆಗೆದುಕೊಂಡರು. ಘಟನಾ

ಸ್ಥಳದಲ್ಲಿ ಸಿಕ್ಕ ಕತ್ತಿಯನ್ನು ಪೊಲೀಸರು ವಶಪಡಿಸಿಕೊಂಡರು. ನಿ.ಪಿ.2 ರ ಮಹಜರ್ ನಲ್ಲಿ ಬರೆದ ವಿಷಯ ನನಗೆ ಗೊತ್ತಿರುತ್ತದೆ. ನಿ.ಪಿ.2 ಮಹಜರ್ ನಲ್ಲಿ ಅಮಾನತ್ತು ಪಡಿಸಿಕೊಂಡ ಕತ್ತಿಯನ್ನು ತೋರಿಸಿದರೆ ಗುರುತು ಹಿಡಿಯುತ್ತೇನೆ. ಈಗ ನ್ಯಾಯಾಲಯದ ಮುಂದೆ ತೋರಿಸಿದ ಕತ್ತಿಯು ನಾನು ಕೃತ್ಯ ಸ್ಥಳದಲ್ಲಿ ನೋಡಿದ ಮತ್ತು ಅಮಾನತ್ತು ಪಡಿಸಿಕೊಂಡ ಕತ್ತಿಯೇ ಆಗಿರುತ್ತದೆ. ಮತ್ತು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

2. ನಿ.ಪಿ.2 ಮಹಜರ್ ಕಾಲಕ್ಕೆ ಪೋಟೋವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಶ್ರೀ ಹೆಚ್.ಎ.ಟಿ. ವಕೀಲರಿಂದ – 1 ರಿಂದ 5 ನೇ ಆರೋಪಿತರ ಪರವಾಗಿ</u>

3. ಪ್ರಸೀದ್ ರವರು ನಮ್ಮ ಊರಿನವರು ಎಂದರೆ ಸರಿ. ನಾನು ಮನೆಗೆ ಪೈಂಟ್ ಮಾಡುವ ಕೆಲಸ ಮಾಡುತ್ತೇನೆ. ನಾನು ಪ್ರಸೀದ್ ರವರ ಮನೆಯ ಪಾಲೀಶ್ ಕೆಲಸವನ್ನು ಮಾಡಿರುತ್ತೇನೆ. ಆದ್ದರಿಂದ ಅವರು ನನಗೆ ಅವರು ಅಷ್ಟೇನು ಆತ್ಮಿಯರಾಗಿರಲಿಲ್ಲ, ಆದರೆ ಅವರು ನನಗೆ ಬೇರೆ ಕಡೆಯಿಂದ ಕೆಲಸ ಕೊಡಿಸುತ್ತಿದ್ದರು. ನನಗೆ ಸಹಿ ಹಾಕುವುದನ್ನು ಬಿಟ್ಟು ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಪೊಲೀಸ್ ರವರು ನನ್ನ ಸಹಿ ತೆಗೆದುಕೊಳ್ಳುವ ಸಂದರ್ಭದಲ್ಲಿ ಸಹಿ ಮಾಡಿದ್ದು ಬಿಟ್ಟರೆ ಅದರ ಬರವಣಿಗೆ ಕುರಿತು ಬೇರೆ ಯಾವುದೇ ವಿಷಯ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ರ ಹಿಡಿತದ ಬಣ್ಣ ನೀಲಿ

ಇರುತ್ತದೆ. ಸದರಿ ಮು.ಮಾ.1 ಸುಮಾರು 3 ಅಡಿ ಉದ್ದ ಇರುತ್ತದೆ. ಪ್ರಸೀದ್ ರವರ ಮನೆಯಲ್ಲಿ ಸದರಿ ಮು.ಮಾ.1 ಇತ್ತು ಮತ್ತು ಅದನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಏನು ಗೊತ್ತಿಲ್ಲ ಮತ್ತು ಪ್ರಸೀದ್ ರವರ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣಕ್ಕಾಗಿ ಮನು ಎಂಬುವವರು ಪ್ರಸೀದ್ ಮೇಲೆ ಹಲ್ಲೆ ಮಾಡಿರುವ ವಿಷಯ ಗೊತ್ತಾಯಿತು ಎಂದು ಮತ್ತು ಈ ವಿಷಯವನ್ನು ಘಟನಾ ಸ್ಥಳದಲ್ಲಿ ನನಗೆ ಪ್ರಸೀದ್ ರವರು ಹೇಳಿ ಘಟನಾ ಸ್ಥಳವನ್ನು ತೋರಿಸಿದರು ಎಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಈ ಘಟನೆ ಕುರಿತಂತೆ ಯಾರು ಏನು ಮಾಡಿದರು ಎಂಬುದು ನನಗೆ ಗೊತ್ತಿಲ್ಲ. ನನಗೆ ಘಟನಾ ಸ್ಥಳಕ್ಕೆ ಬರಲು ಪೊಲೀಸರು ಯಾವುದೇ ನೋಟೀಸನ್ನು ನೀಡಿರಲಿಲ್ಲ. ನಾನು ಪೊಲೀಸರ ಮಾತು ಮತ್ತು ಪ್ರಸೀದ್ ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತ್ತು ಯಾವು ದೇ ಮಹಜರ್ ಗೆ ಸಹಿ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಮತ್ತು ನಿ.ಪಿ.2 ಮಹಜರ್ ಕಾಲಕ್ಕೆ ಯಾವುದೇ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – 6 ನೇ ಆರೋಪಿತರ ಪರವಾಗಿ</u>

4. 1 ನೇ ಆರೋಪಿತರ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ